(ಸದನವು ಮೃತರ ಗೌರವಾರ್ಥ ಎದ್ದು ನಿಂತು ಒಂದು ನಿಮಿಷ ಮೌನ ಆಚರಿಸಿತು)

ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬಕ್ಕೆ ಕಳುಹಿಸಿಕೊಡಲಾಗುವುದು.

3. (i) ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ:– ವಿರೋಧ ಪಕ್ಷಗಳ ಮುಖಂಡರ ಸಭೆಗೆ ವಿಧಾನ ಸಭೆಯ ನಾಯಕರುಗಳು ಹಾಗೂ ಪಕ್ಷೇತರ ಸದಸ್ಯರುಗಳನ್ನು ಆಹ್ವಾನಿಸದಿರುವ ಬಗ್ಗೆ

+ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):– ಮಾನ್ಯ ಅಧ್ಯಕ್ಷರೇ, ನೀವು ಮೊನ್ನೆ ವಿರೋಧ ಪಕ್ಷಗಳ ಮುಖಂಡರುಗಳ ಸಭೆಯೊಂದನ್ನು ಕರೆದಿದ್ದಿರಿ. ಆದರೆ ನನ್ನನ್ನು ಜೆ.ಡಿ. (ಯು) ಪಕ್ಷದವರನ್ನು ಹಾಗೂ ಕನ್ನಡ ಚಳುವಳಿ ವಾಟಾಳ್ ಪಕ್ಷದ ವಾಟಾಳ್ ನಾಗರಾಜ್‌ರವರು ಸೇರಿದಂತೆ ನಮ್ಮನ್ಯಾರನ್ನೂ ಕೂಡ ತಾವು ಆ ಸಭೆಗೆ ಕರೆದಿರಲಿಲ್ಲ.

ಅಧ್ಯಕ್ಷರು:– ತಮಗೆ ಈ ಮಾಹಿತಿಯನ್ನು ಕೊಟ್ಟವರು ಯಾರು ಸ್ವಾಮಿ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಮಾಹಿತಿ ನಿಮ್ಮ ಹತ್ತಿರವೇ ಇರಬೇಕಲ್ಲಾ?

ಅಧ್ಯಕ್ಷರು:– ನಾನು ಯಾವ ಸಭೆಯನ್ನೂ ಕರೆದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಯಾವ್ಯಾವ ಪಕ್ಷಗಳಿಂದ ಯಾರ್ಯಾರು ಆಯ್ಕೆಯಾಗಿದ್ದಾರೆಂಬ ಮಾಹಿತಿಯನ್ನು ಚುನಾವಣಾ ಆಯೋಗದವರು ಫಲಿತಾಂಶ ಪ್ರಕಟಿಸಿದಾಗ ತಮಗೆ ನೀಡಿದ್ದಾರೆ. 15ನೇ ತಾರೀಖಿನಂದೇ ಚುನಾವಣಾ ಕಮೀಷನರ್‌ರವರು ನೋಟಿಫಿಕೇಷನ್ ಮೂಲಕ ತಮಗೆ ಮಾಹಿತಿಯನ್ನು ತಲುಪಿಸಿದ್ದಾರೆ. ಅದರಲ್ಲಿ ಯಾವ್ಯಾವ ಪಕ್ಷಗಳಿಂದ ಯಾರ್ಯಾರು ಆಯ್ಕೆಯಾಗಿದ್ದಾರೆ ಎಂಬ ಬಗ್ಗೆ ಸ್ಪಷ್ಟವಾದ ಮಾಹಿತಿ ಇದೆ. ಆ ಪಟ್ಟಿಯನ್ನು ತಾವೇ ಇಟ್ಟುಕೊಂಡಿದ್ದೀರಿ. ಅದೇ ನಿಮಗೆ ಮಾಹಿತಿ. ಅದು ಬಿಟ್ಟು ಬೇರೆ ನಿಮಗೆ ಯಾವ ಮಾಹಿತಿ ಬೇಕು? ಆ ತರಹದ ಮಾಹಿತಿ ನಿಮ್ಮ ಬಳಿ ಇದ್ದಂತಹ ಸಂದರ್ಭದಲ್ಲಿ ನೀವು....

ಅಧ್ಯಕ್ಷರು:– ಮಾನ್ಯ ಸದಸ್ಯರಿಗೆ ನಾನು ಹೇಳುವುದೇನೆಂದರೆ....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– .... ನೀವು ಬಿ.ಜೆ.ಪಿ. ಯವರನ್ನು ಮಾತ್ರ ಕರೆದಿದ್ದೀರಿ. ಅವರಲ್ಲದೆ ಸದನದಲ್ಲಿ ಜೆ.ಡಿ. (ಯು) ನವರು ಇದ್ದಾರೆ. ಶ್ರೀ ವಾಟಾಳ್‌ರವರು ಇದ್ದಾರೆ, ಅವರ ಜೊತೆಗೆ ನಾನೂ ಸಹಾ ಇದ್ದೇನೆ. ಆದರೆ ನಮ್ಮನ್ಯಾರನ್ನೂ ಸಹ ಕರೆಯದೇ ನೀವೊಂದು ಸಭೆಯನ್ನು ಮಾಡಿ ಬಿಟ್ಟಿದ್ದೀರಿ. ನಮ್ಮನ್ನು ನೀವು ಯಾವ ಲೆಕ್ಕಕ್ಕೆ ಸೇರಿಸಿದ್ದೀರಿ ಎಂದಾದರೂ ನಮಗೆ ಗೊತ್ತಾಗಬೇಕಲ್ಲವೇ?

ಅಧ್ಯಕ್ಷರು:– ಮಾನ್ಯ ಸದಸ್ಯರಿಗೆ ನಾನು ತಿಳಿಸುವುದೇನೆಂದರೆ, ನಾನು ಯಾವ ಸಭೆಯನ್ನೂ ಕರೆದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಆದರೆ ಆ ಬಗ್ಗೆ ಪತ್ರಿಕೆಗಳಲ್ಲಿ ಬಂದಿದೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, ಆ ಬಗ್ಗೆ ಪತ್ರಿಕೆಗಳಲ್ಲಿ ಹಾಗೂ ಟಿ.ವಿ. ಮಾಧ್ಯಮಗಳಲ್ಲಿ ಬಂದಿದೆ. ಮಾನ್ಯ ಅಧ್ಯಕ್ಷರು ವಿರೋಧ ಪಕ್ಷಗಳ ಮುಖಂಡರುಗಳ ಸಭೆಯೊಂದನ್ನು ಕರೆದಿದ್ದರು. ಅದರಲ್ಲಿ ಮಾನ್ಯ ಅಧ್ಯಕ್ಷರಾದ ತಾವು ಮಾನ್ಯ ಮುಖ್ಯಮಂತ್ರಿಗಳು,

ಮಾನ್ಯ ಉಪ ಮುಖ್ಯಮಂತ್ರಿಗಳ ಜೊತೆಗೆ ಮಾತನಾಡಿ ಇನ್ನು ಮುಂದೆ ನಾವು ಯಾವ ರೀತಿ ಇರಬೇಕು? ರಾಜ್ಯ ಹೇಗಿರಬೇಕು? ಸುಭಿಕ್ಷವಾಗಿರಬೇಕು ಎಂಬೆಲ್ಲಾ ವಿಚಾರಗಳನ್ನು ಮಾತನಾಡಿದ್ದೀರಿ. ಆ ಸಭೆಗೆ ನೀವು ನಮ್ಮನ್ನು ಏಕೆ ಕರೆಯಲಿಲ್ಲ? ನಾವು 'ಸುಭಿಕ್ಷ' ಪರವಾಗಿ ಮಾತನಾಡುವವರು ಅಲ್ಲವೆಂದು ನೀವು ತೀರ್ಮಾನ ಮಾಡಿಕೊಂಡಿದ್ದೀರೇನೋ ಎಂದು ನನಗನ್ನಿಸುತ್ತದೆ.

ಅಧ್ಯಕ್ಷರು:– ತಪ್ಪಾಗಿ ವರದಿಯಾಗಿದೆ. ನಾನು ಯಾವ ಸಭೆಯನ್ನೂ ಸಹ ಕರೆದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ:– ವರದಿ ತಪ್ಪಾಗಿಲ್ಲ ಸಾರ್. ಕರೆಯುವಾಗ ಏನಾದರೂ ತಪ್ಪಾಗಿದೆಯೇನೋ ಎಂಬ ಮಾಹಿತಿ ನಮಗೆ ಬೇಕಷ್ಟೇ. ನಾವು ಅದನ್ನು ಮಾಧ್ಯಮಗಳಲ್ಲಿ ನೋಡಿದ್ದೇವೆ. ಮಾನ್ಯ ಅಧ್ಯಕ್ಷರು ಮಾನ್ಯ ವಿರೋಧ ಪಕ್ಷದ ನಾಯಕರ ಜೊತೆಗೆ ಮಾತನಾಡಿದಿರಿ... ಆ ಮೀಟಿಂಗ್‌ನಲ್ಲಿ ಮಾಜಿ ಸಭಾಧ್ಯಕ್ಷರಾದ ರಮೇಶ್ ಕುಮಾರ್‌ರವರೂ ಸಹ ಇದ್ದರು. ತಾವು ಅವರನ್ನು ಸಾಕ್ಷಿಯಾಗಿ ಪರಿಗಣಿಸಬಹುದು. ಎಲ್ಲರೂ ಚಹಾ ಕೂಟದಲ್ಲಿ ಇದ್ದರು.

ಅಧ್ಯಕ್ಷರು:– ಮಾನ್ಯ ಸದಸ್ಯರುಗಳಲ್ಲಿ ನನ್ನದೊಂದು ಮನವಿ. ನನ್ನ ಗೌರವಾರ್ಥ ಮೇಲ್ಮನೆಯ ಸಭಾಪತಿಗಳವರು ಒಂದು Break-fast ಅನ್ನು ಏರ್ಪಾಡು ಮಾಡಿದ್ದರು. ಆ ಸಂದರ್ಭದಲ್ಲಿ ಅವರು ಯಾರಿಗೆ ಆಹ್ವಾನ ಕೊಟ್ಟಿದ್ದರೋ ಅವರಲ್ಲಿ ಕೆಲವರು ಅಲ್ಲಿ ಭಾಗವಹಿಸಿದ್ದರು. ಅದು ಬಹುಶಃ ವರದಿಯಾಗಿ ತಪ್ಪು ತಿಳುವಳಿಕೆಗೆ ಕಾರಣವಾಗಿರಬಹುದು. ನಾನು ಯಾವುದೇ ಒಂದು ಸಭೆಯನ್ನು ಕರೆದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ (ಕೆಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೇ, ಆ ರೀತಿ ಔಪಚಾರಕವಾಗಿ ಅಥವಾ ಅವರು ವಿರೋಧ ಪಕ್ಷದ ಎಲ್ಲರನ್ನೂ ಸಹಿತ ಕರೆಯುವಂತಹ ಸಂದರ್ಭ ಇದ್ದರೆ, ಸಂಸದೀಯ ನಡವಳಿಕೆಗಳ ಸಚಿವರನ್ನೂ ಕೂಡ ಕರೆಯುತ್ತಿದ್ದರು. ಆದರೆ ಮಾನ್ಯ ಅಧ್ಯಕ್ಷರು ಹೇಳಿದಂತೆ, ಅವರು ಅನೌಪಚಾರಿಕವಾದಂತಹ ರೀತಿಯಲ್ಲಿ ಕೆಲವು ಜನ ಸ್ನೇಹಿತರ ಜೊತೆಗೆ ಕಲೆತಿರತಕ್ಕಂಥದ್ದು ಆಗಿದೆಯೇ ವಿನಃ ಔಪಚಾರಿಕವಾಗಿ ವಿರೋಧ ಪಕ್ಷದವರೆಲ್ಲರನ್ನೂ ಕರೆಯಲೇ ಬೇಕಾಗಿರತಕ್ಕ ಸಂದರ್ಭದಲ್ಲಿ ತಮ್ಮನ್ನೂ ಕೂಡ ಕರೆಯುವುದು ಸತ್ ಸಂಪ್ರದಾಯವಾಗುತ್ತದೆ. ಆಗ ತಮ್ಮನ್ನು ಕರೆದೇ ತೀರುತ್ತೇವೆ. ತಾವೆಲ್ಲರೂ ಕೂಡ ಹಿರಿಯರಾಗಿದ್ದೀರಿ, ಇಲ್ಲಿ ಸದಸ್ಯರಾಗಿ ಆಯ್ಕೆಯಾಗಿ ಬಂದಿದ್ದೀರಿ, ನಿಮ್ಮ ಸಲಹೆ ಮತ್ತು ಸೂಚನೆ ಇವೆಲ್ಲವೂ ನಮಗೆ ಬಹಳ ಮುಖ್ಯವಾದುದು. ಆ ದಿವಸ ಅಲ್ಲಿ ಒಂದು ಉಪಹಾರ ಕೂಟವನ್ನು ಏರ್ಪಾಡು ಮಾಡಿದ ನಂತರ ಕೆಲವು ಸದಸ್ಯರು ಬಂದಾಗ, ಮಾನ್ಯ ಅಧ್ಯಕ್ಷರು ಅವರ ಜೊತೆಗೆ ಮಾತನಾಡಿದ್ದಾರೆ. ತಮ್ಮ ಸಲಹೆಯನ್ನೂ ಕೂಡ ನಾವು....

ಶ್ರೀ ವಾಟಾಳ್ ನಾಗರಾಜ್:– ಆ ಕೂಟಕ್ಕೂ ನಮಗೂ ಸಂಬಂಧ ಇಲ್ಲವೇ? ಅದೇನಾದರೂ ಗೋಪ್ಯವಾದ ಕೂಟವೇ? ವಿಚಾರ ಏನೆಂದು ನನಗೆ ಅರ್ಥವಾಗಲಿಲ್ಲ. ಮಾನ್ಯ ಸಂಸದೀಯ ಸಚಿವರಾದ ತಾವು ಹಿರಿಯರಿದ್ದೀರಿ, ತಾವು ವಿರೋಧ ಪಕ್ಷದಲ್ಲಿದ್ದಿರಿ. ಈಗ ಆಡಳಿತ ಪಕ್ಷಕ್ಕೆ ಹೋಗಿದ್ದೀರಿ. ನೀವು ಈ ರೀತಿಯಾಗಿ ಸಮರ್ಥನೆ ಮಾಡಿಕೊಳ್ಳುವುದು ಸರಿಯಲ್ಲ. ಇದೇನೆಂದು ನನಗೆ ಅರ್ಥವಾಗುತ್ತಿಲ್ಲ.

Sri J.C. Madhuswamy:- Sir, you are defending a bad case.

ಶ್ರೀ ವಾಟಾಳ್ ನಾಗರಾಜ್:– ತಾವು ಆ ಸಭೆಗೆ ನಮ್ಮನ್ನು ಕರೆಯದಿರುವುದು ವಿಷಾದ ಎಂದರೆ ನಾನು ಸಂತೋಷ ಪಡುತ್ತೇನೆ. ತಾವು ಇದನ್ನು ಸಮರ್ಥನೆ ಮಾಡಬಾರದು.

ಶ್ರೀ ಜೆ.ಸಿ. ಮಾಧುಸ್ವಾಮಿ:– ಸಮಾಧಾನ ಮಾಡಬೇಕಾದುದು ಮಾನ್ಯ ಸಂಸದೀಯ ಸಚಿವರ ಹುದ್ದೆಯ ಕರ್ತವ್ಯವಾಗಿದೆ. ಸ್ವಾಭಿಮಾನ ಎನ್ನುವುದು ನಮಗೂ ಇದೆ. ಅದು ಮಾಧ್ಯಮಗಳಲ್ಲಿ ಪ್ರತಿಬಿಂಬ ಆಗಬೇಕಾದರೆ ವಿರೋಧ ಪಕ್ಷದಲ್ಲಿ ನಮ್ಮನ್ನೇನಾದರೂ ಗುರುತಿಸಿದ್ದೀರೋ ಇಲ್ಲವೋ ಎಂಬುದನ್ನು ಮಾನ್ಯ ಅಧ್ಯಕ್ಷರು ದಯವಿಟ್ಟು ಬಾಯಿ ಬಿಟ್ಟು ಹೇಳಬೇಕು.

ಅಧ್ಯಕ್ಷರು:– ಮಾನ್ಯ ಸದಸ್ಯರಲ್ಲಿ ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ನಾನು ಅಧಿಕೃತವಾಗಿ ಯಾವುದೇ ಒಂದು ಸಭೆಯನ್ನೂ ಸಹ ಕರೆದಿಲ್ಲ. ಅಲ್ಲಿ ಏನೊಂದು ಚಹಾ ಕೂಟವನ್ನು ಕರೆದಿದ್ದರೋ ಅದಕ್ಕೆ ಅವರು ಕೆಲವರಿಗೆ ಆಹ್ವಾನವನ್ನು ನೀಡಿದ್ದರು. ಆ ರೀತಿಯಾಗಿ ಪತ್ರಿಕೆಗಳಲ್ಲಿ ಹಾಗೂ ಟಿ.ವಿ. ಮಾಧ್ಯಮಗಳಲ್ಲಿ ಪ್ರಚಾರವಾಗಿದೆ. ಅದೊಂದು ತಪ್ಪು ತಿಳುವಳಿಕೆಯಾಗಿದೆ. ನಾನು ಸಭೆಯನ್ನು ಕರೆಯುವಾಗ ಎಲ್ಲಾ ವಿರೋಧ ಪಕ್ಷಗಳ ಮುಖಂಡರುಗಳನ್ನೂ ಸಹ ಕರೆಯುತ್ತೇನೆ. ಇಲ್ಲಿ ತಪ್ಪು ತಿಳುವಳಿಕೆಯಾಗಿದೆ. ದಯಮಾಡಿ ಇದನ್ನು ಇಲ್ಲಿಗೆ ಮುಗಿಸಿ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಮುಖ್ಯಮಂತ್ರಿಗಳೂ ಕೂಡ ವಿರೋಧ ಪಕ್ಷದವರು ಯಾರು ಎಂಬುದನ್ನು ಮರೆತಿರುವುದು ಸರಿಯಲ್ಲ. ಇಷ್ಟು ಬೇಗ ಮಾನ್ಯ ಮುಖ್ಯಮಂತ್ರಿಗಳು ನಮ್ಮನ್ನು ಹೇಗೆ ಮರೆತರು? ಮಾನ್ಯ ಮುಖ್ಯಮಂತ್ರಿಗಳೂ ಸಹ ನಮ್ಮನ್ನು ಮರೆಯುತ್ತಾರೆಂದು ಎಂದೂ ನಾನು ತಿಳಿದುಕೊಂಡಿರಲಿಲ್ಲ.

ಅಧ್ಯಕ್ಷರು:– ಈ ವಿಚಾರವನ್ನು ಇಲ್ಲಿಗೇ ಮುಗಿಸೋಣ.

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು):– ಮಾನ್ಯ ಸಭಾಪತಿಗಳಾದ ವಿ.ಆರ್. ಸುದರ್ಶನ್‌ರವರು ನನಗೆ ಫೋನ್ ಮಾಡಿ, Break-fast arrange ಮಾಡಿದ್ದೇವೆ, ತಾವೂ ಕೂಡ ಬರಬೇಕೆಂದು ನನ್ನನ್ನೂ ಕೂಡ ಕರೆದಿದ್ದರು. ನಾವು ಸಭಾಧ್ಯಕ್ಷರು, ಮಾನ್ಯ ಯಡಿಯೂರಪ್ಪನವರು, ಮಾನ್ಯ ಉಪ ಮುಖ್ಯಮಂತ್ರಿಗಳು, ಎಲ್ಲಾ ಮಂತ್ರಿಗಳೂ ಕೂಡ ಅದಕ್ಕೆ ಹೋಗಿದ್ದೆವು. ಕರೆಯುವುದು ಅವರಿಗೆ ಬಿಟ್ಟಿದ್ದು. ವಿರೋಧ ಪಕ್ಷದವರೆಂದರೆ ತಮ್ಮನ್ನೆಲ್ಲಾ ಕೂಡ ಕರೆಯಬೇಕೆಂದು ತಾವೇನು ಹೇಳುತ್ತಿದ್ದೀರೋ ಅದು correct. ಮುಂದೆ ವಿರೋಧ ಪಕ್ಷಗಳ ನಾಯಕರುಗಳನ್ನು ಕರೆಯುವಾಗ ತಮ್ಮನ್ನೂ ಕೂಡ ಕರೆಯಬೇಕೆಂದು ನಾನು ಅವರ ಗಮನಕ್ಕೆ ತರುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಮಾನ್ಯ ಅಧ್ಯಕ್ಷರೇ, ತಮ್ಮಿಂದ ನಮಗೆ ರಕ್ಷಣೆಬೇಕು. ತಾವು ತಮ್ಮ ಕಛೇರಿಯಲ್ಲಿ ಸಭೆಯನ್ನು ಕರೆದಿದ್ದಿರಿ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಅಲ್ಲಿ ಎಲ್ಲಾ ವಿರೋಧ ಪಕ್ಷದ ನಾಯಕರುಗಳು ಇದ್ದರು. ತಾವೇ ನಮ್ಮನ್ನು ನೆಗ್ಲೆಟ್ ಮಾಡುವುದಾದರೆ, ನಾವು ಇನ್ಯಾರನ್ನು ಕೇಳಬೇಕು ಹೇಳಿ?

ಅಧ್ಯಕ್ಷರು:– ಮಾನ್ಯ ಸದಸ್ಯರಿಗೆ ನಾನು ತಿಳಿಸುವುದೇನೆಂದರೆ, ನಾನು ಸಭೆಯನ್ನು ಕರೆದಿಲ್ಲ ಎಂಬುದನ್ನು ನಾನು ಸ್ಪಷ್ಟವಾಗಿ ತಿಳಿಸಿದ್ದೇನೆ. ಆ ಚಹಾ ಕೂಟ ಕರೆದವರು ಮಾನ್ಯ ಸಭಾಪತಿಯವರು. ಆ ಚಹಾ ಕೂಟಕ್ಕೆ ಯಾರ್ಯಾರನ್ನು ಆಹ್ವಾನ ಮಾಡಬೇಕು ಎಂಬುದು ಅವರಿಗೆ ಬಿಟ್ಟಿದ್ದು. ಆ ರೀತಿ

ತಪ್ಪು ತಿಳುವಳಿಕೆಯಾಗಿದೆ. ಅದನ್ನು ಇಲ್ಲಿಗೆ ಮುಗಿಸಿ ತಾವು ದಯಮಾಡಿ ಕುಳಿತುಕೊಳ್ಳಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ii) ಕಾವೇರಿ ನದಿ ನೀರಿನ ಹಂಚಿಕೆಯ ಬಗ್ಗೆ ಹೇಳಿಕೆ

+**ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):**– ಮಾನ್ಯ ಅಧ್ಯಕ್ಷರೇ, ತಮ್ಮಲ್ಲಿ ನನ್ನದೊಂದು ಮನವಿ ಇದೆ. ಕಾವೇರಿ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೊಡಬೇಕು. ಮೂರು ದಿವಸಗಳಿಂದ ಸದನದ ಹೊರಗಡೆ ನಾವು ತಮಿಳುನಾಡಿಗೆ ನೀರು ಬಿಡುವುದಿಲ್ಲ ಎಂದು ಹೇಳುತ್ತಿದ್ದೀರಿ. ಈ ಮಧ್ಯೆ ತಮಿಳುನಾಡಿನ ನಿಯೋಗವೊಂದು ನಮ್ಮಲ್ಲಿಗೆ ಬಂದಿತ್ತು...

ಅಧ್ಯಕ್ಷರು:– ಆ ಬಗ್ಗೆ ಅನಂತರ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, ನಾವು ತಮ್ಮ ಹೇಳಿಕೆಯೊಂದನ್ನು ಸಹಾ ನೋಡಿದೆವು. ತಮ್ಮಲ್ಲಿ ನಾನು ಅರಿಕೆ ಮಾಡಿಕೊಳ್ಳುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಸದನಕ್ಕೆ ಈ ವಿಚಾರದ ಬಗ್ಗೆ ಸ್ವಲ್ಪ ತಿಳಿಸಲಿ. ಈಗ ಸದನ ಸೇರಿದೆ. ಕಾವೇರಿ ಬಗ್ಗೆ ...

ಅಧ್ಯಕ್ಷರು:– ನಾನು ಅದಕ್ಕೆ ನಂತರ ಅವಕಾಶ ಮಾಡಿಕೊಡುತ್ತೇನೆ. ವಿಷಯಗಳನ್ನು ಅಜೆಂಡಾ ಪ್ರಕಾರ ಒಂದೊಂದಾಗಿ ತೆಗೆದುಕೊಳ್ಳೋಣ. ನಾನು ನಂತರ ತಮಗೆ ಆ ವಿಷಯ ಪ್ರಸ್ತಾಪಿಸಲು ಅವಕಾಶ ಮಾಡಿಕೊಡುತ್ತೇನೆ. ಈಗ ಸಭೆಯ ಮುಂದಿಡಲಾಗುವ...

ಶ್ರೀ ಜೆ.ಸಿ. ಮಾಧುಸ್ವಾಮಿ:– ಮಾನ್ಯ ಅಧ್ಯಕ್ಷರೆ, ಸದನ ನಡೆಯುವಾಗ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಸದನದ ಹೊರಗಡೆ ಪಾಲಿಸಿ ಮ್ಯಾಟರ್ ಬಗ್ಗೆ ಹೇಳಿಕೆ ಕೊಡುತ್ತಾ ಬಂದರೆ ಇಲ್ಲಿ ನಮ್ಮ ಗತಿಯೇನು ಸಾರ್? ಇಲ್ಲಿ ಶಾಸನ ಸಭೆ ನಡೆಯುತ್ತಿದೆ. ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಕೂಡ ನಾವು ನೀರು ಬಿಡುವುದಿಲ್ಲವೆಂದು ಹೊರಗಡೆ ಹೇಳುತ್ತಿದ್ದಾರೆ. ಸದನದ ಹೊರಗಡೆ ಹೇಳುವ ಮುನ್ನ ಈ ಸದನಕ್ಕೆ ಮೊದಲು ಹೇಳಬೇಕಾದುದು ಅವರ ಕರ್ತವ್ಯವಲ್ಲವೇ ಸಾರ್?

ಶ್ರೀ ವಾಟಾಳ್ ನಾಗರಾಜ್:– ಇದರ ಜೊತೆಗೆ ತಮಿಳುನಾಡಿನಿಂದ ನಿಯೋಗವೊಂದು ಸಹ ಬಂದಿದೆ. ಆ ನಿಯೋಗದವರು ಇವರಿಗೆ ಏನು ಕೇಳಿದ್ದಾರೆ? ಅದಕ್ಕೆ ಇವರು ಏನು ಹೇಳಿದ್ದಾರೆ? ಇದು ಬಹಳ ಪ್ರಾಮುಖ್ಯವಾದಂತಹ ವಿಚಾರ. ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಸದನಕ್ಕೆ ಆ ಬಗ್ಗೆ ತಿಳಿಸಬೇಕು.

ಅಧ್ಯಕ್ಷರು:– ನಾನು ಮಾನ್ಯ ಸದಸ್ಯರಲ್ಲಿ ಒಂದು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಈಗ ಈ ಅಜೆಂಡಾ ಪ್ರಕಾರ ಕೆಲವು ವಿಷಯಗಳಿವೆ. ಅದಾದ ಮೇಲೆ ತಾವು ಯಾವುದೇ ವಿಚಾರ ಪ್ರಸ್ತಾಪ ಮಾಡುವುದಕ್ಕೆ ನಾನು ಅವಕಾಶ ಮಾಡಿಕೊಡುತ್ತೇನೆ. ದಯಮಾಡಿ ಈಗ ತಾವು ತಮ್ಮ ಆಸನದಲ್ಲಿ ಕುಳಿತುಕೊಳ್ಳಬೇಕು.

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು):– ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ಮಾನ್ಯ ಮಾಧುಸ್ವಾಮಿಯವರು ಕಾವೇರಿ ಬಗ್ಗೆ ಇಲ್ಲಿ ಪ್ರಸ್ತಾಪಿಸಿದ್ದಾರೆ. ನಾವೇನೂ ಅಧಿಕೃತವಾಗಿ ಹೇಳಿಲ್ಲ. ಎಲ್ಲೆಲ್ಲಿ ನಮಗೆ....